ದಿನಾಂಕ : **12.03.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎನ್.ಎಸ್.ಎನ್. 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಸ್ವತ್ತುಗಳು ಮೂಲತಃ ಹಿಲ್ಡಾ ರವರ ಹೆಸರಿನಲ್ಲಿತ್ತು. ಅವರಿಗೆ ಅವರ ಗಂಡನಿಂದ ಬಂದಿರತಕ್ಕಂತಹ ಸ್ವತ್ತಾಗಿರುತ್ತದೆ.ದಿಃ 03.02.1989 ರಲ್ಲಿ ಹಿಲ್ಡಾರವರ ಗಂಡನಾದ ಫ್ರಾನ್ಸಿಸ್ ಕ್ಸೇವಿಯರ್ ರವರಿಗೆ 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ಆ ರೀತಿ 1 ಎಕರೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಸದರಿ ದಿಃ 03.02.1989 ರ ಮೂಲ ಕ್ರಯಪತ್ರ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರಲು ಯಾವುದೇ ಕಾರಣ ಇರುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ದಾವಾ ಸ್ವತ್ತನ್ನು ಕ್ರಯವರಿಸಿಕೊಳ್ಳುವ ಸಮಯದಲ್ಲಿ ನನ್ನ ಮತ್ತು ಹಿಲ್ಡಾ ರವರ ನಡುವೆ ಒಂದು ಕರಾರು ಪತ್ರ ಆಗಿರುತ್ತದೆ. ಸದರಿ ಕರಾರು ಪತ್ರ ನನ್ನ ಬಳಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. 1 ಎಕರೆ ಸ್ವತ್ತನ್ನು ನಾನು ಖರೀದಿಸುತ್ತೇನೆ ಎಂದು ಮಾತುಕತೆಯಾಗಿತ್ತು. ನನ್ನ ಬಳಿ ಹಣದ ಅಭಾವವಾದ ಕಾರಣ ನಾನು ಸ್ವತ್ತನ್ನು ಕ್ರಯವರಿಸಿಕೊಳ್ಳಲು ಆಗಿರುವುದಿಲ್ಲ. ಆದ್ದರಿಂದ 50

ಸೆಂಟ್ಸ್ ಸ್ವತ್ತನ್ನು ಮಾತ್ರ ನಾನು ಕ್ರಯವರಿಸಿಕೊಳ್ಳುತ್ತೇನೆ ಎಂದು ಹಿಲ್ಡಾರವರ ಬಳಿ ತಿಳಿಸಿದ್ದೆ ಎಂದರೆ, ಸದರಿ ವಿಚಾರವನ್ನು ಅವರೇ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತೇನೆ. ಹಿಲ್ಡಾರವರು 1 ಎಕರೆ ಸ್ವತ್ತನ್ನು ಮಾತ್ರ ಮಾರಾಟ ಮಾಡುತ್ತೇನೆ ಮತ್ತು ಅರ್ಧ ಎಕರೆ ಮಾರಾಟ ಮಾಡುವುದಿಲ್ಲ ಎಂದು ನನಗೆ ತಿಳಿಸಿದ್ದರು ಎಂದರೆ, ನನ್ನ ಬಾವನ ಬಳಿ ತಿಳಿಸಿದ್ದಾರೆ. ನಾನು ಆ ಸಮಯದಲ್ಲಿ ಮೂಡುಬೆಳ್ಳೆಯಲ್ಲಿ ಕೆಲಸ ಮಾಡುತ್ತಿದ್ದೆ.

ನನ್ನ ಮತ್ತು ಹಿಲ್ಡಾ ರವರ ನಡುವೆ ಆದಂತಹ ಕರಾರು ಪತ್ರದಲ್ಲಿ 3 ನೇ ಪ್ರತಿವಾದಿಯಾದಂತಹ ನನ್ನ ಬಾವ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು 50 ಸೆಂಟ್ಸ್ ಸ್ವತ್ತನ್ನು ಕ್ರಯವರಿಸಿಕೊಂಡು 2 ನೇ ಪ್ರತಿವಾದಿಯು ಉಳಿದ 50 ಸೆಂಟ್ಸ್ ಸ್ವತ್ತನ್ನು ಕ್ರಯವರಿಸಿಕೊಳ್ಳುವಂತೆ ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವುದಿಲ್ಲ. 50 ಸೆಂಟ್ಸ್ ಸ್ವತ್ತನ್ನು 2 ನೇ ಪ್ರತಿವಾದಿ ಖರೀದಿಸಬೇಕು ಎಂದು ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಯಾವುದೇ ಒಪ್ಪಂದ ಆಗಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಕ್ರಯದ ಮೊಬಲಗನ್ನು ನಾನು ಪಾವತಿಸಿದ್ದೇನೆ. 2 ನೇ ಪ್ರತಿವಾದಿ ಕ್ರಯವರಿಸಿಕೊಂಡಂತಹ ಸ್ವತ್ತಿನ ಕ್ರಯ ಮೊಬಲಗಳನ್ನು 3 ನೇ ಪ್ರತಿವಾದಿ ಪಾವತಿಸಿದ್ದಾರೆ. ಎರಡೂ ಕ್ರಯಪತ್ರಗಳು ದಿಃ 04.04.2007 ರಂದು ನೊಂದಣಿಯಾಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಪಿ - 1 ದಾಖಲೆಯು ನಾನು ಕ್ರಯವರಿಸಿದ ಸ್ಥಿರಾಸ್ತಿಗೆ

ಸಂಬಂಧಿಸಿರುತ್ತದೆ. ಈಗ ನನಗೆ ತೋರಿಸಿದ ಇನ್ನೊಂದು ಕ್ರಯಪತ್ರ 2 ನೇ ಪ್ರತಿವಾದಿ ಕ್ರಯವರಿಸಿಕೊಂಡ ಸ್ವತ್ತಿನ ಕ್ರಯಪತ್ರವಾಗಿರುತ್ತದೆ. ಅದನ್ನು ಒಪ್ಪಿಕೊಂಡ ಕಾರಣ, ದಿಃ 04.04.2007 ರ ಕ್ರಯಪತ್ರದ ಜೆರಾಕ್ಸ್ ಪ್ರತಿಯನ್ನು ನಿಡಿ - 1 ಎಂದು ಗುರುತಿಸಲಾಯಿತು. ನಾನು ಕ್ರಯವರಿಸಿಕೊಂಡ ಸ್ವತ್ತಿನ ಕ್ರಯಪತ್ರವನ್ನು ಒಪ್ಪಿ ನಾನು ಸದರಿ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿದ್ದೇನೆ. 2 ನೇ ಪ್ರತಿವಾದಿ ಅವರ ಕ್ರಯಪತ್ರವನ್ನು ಒಪ್ಪಿ ಅವರ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿ. ಈಗ ನನಗೆ ದಿಃ18.09.2015 ರ ದಾನಪತ್ರವನ್ನು ತೋರಿಸಿದ್ದು, ಅದರ ಪ್ರಕಾರ 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ತಾವು ಖರೀದಿಸಿದ ಸ್ವತ್ತಿನ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ನೋಟರೀಕೃತ ದಾನಪತ್ರವನ್ನು ನಾನು ಒಪ್ಪಿಕೊಂಡ ಕಾರಣ ನಿಡಿ - 2 ಎಂದು ಗುರುತಿಸಲಾಯಿತು. ನಾನು ಕ್ರಯವರಿಸಿದ ಸ್ವತ್ತು ಈಗ ಸರ್ವೆ ನಂಬ್ರ 254/5 ಎಂದು ಪ್ಲಾಟಿಂಗ್ ಆಗಿರುತ್ತದೆ. 3 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯು ಬರೆದುಕೊಟ್ಟಂತಹ ದಾನ ಪತ್ರದ ಪ್ರಕಾರವಾಗಿ ಪ್ಲಾಟಿಂಗ್ ಆಗಿದ್ದು ಅದರ ಸರ್ವೆ ನಂಬ್ರ 254/6 ಎಂದು ನಮೂದಾಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನನಗೆ ತೋರಿಸಿದ್ದು, ನಾನು ಒಪ್ಪಿಕೊಂಡ ಕಾರಣ ನಿಡಿ - 3 ಎಂದು ಗುರುತಿಸಲಾಯಿತು.

ದಾವಾ ಸ್ವತ್ತುಗಳು ಉತ್ತರದಿಂದ ದಕ್ಷಿಣಕ್ಕೆ ಇಳಿಜಾರು ಪ್ರದೇಶ ಎಂದರೆ, ಪೂರ್ವದಿಂದ ಪಶ್ಚಿಮಕ್ಕೆ ಇಳಿಜಾರು ಇರುತ್ತದೆ. 3 ನೇ ಪ್ರತಿವಾದಿಯ ಸ್ವತ್ತು ಸಹಾ ಇಳಿಜಾರಿನ ಪ್ರದೇಶದಲ್ಲಿರುತ್ತದೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟುವ ಪೂರ್ವದಲ್ಲಿ ಇಳಿಜಾರು ಪ್ರದೇಶವನ್ನು ಸಮತಟ್ಟು ಮಾಡಿದ್ದೇವೆ ಎಂದರೆ ಸರಿ. ನಂತರ ನಾವು ಮನೆ ಕಟ್ಟಿರುತ್ತೇವೆ. ವಿವಾದಿತ ರಸ್ತೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿದ್ದೇನೆ ಎಂದರೆ, 3 ನೇ ಪ್ರತಿವಾದಿ ಮಾಡಿರುತ್ತಾರೆ. 3 ನೇ ಪ್ರತಿವಾದಿ ಸದರಿ ರಸ್ತೆಯನ್ನು ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ. ವಿವಾದಿತ ರಸ್ತೆಯು ದಿಃ 03.02.1989 ರಂದು ಫ್ರಾನ್ಸಿಸ್ ಕ್ಸೇವಿಯರ್ ರವರು ಮಾಡಿದ ಕ್ರಯಪತ್ರದಲ್ಲಿ ಕಾಣಿಸುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ವಿವಾದಿತ ರಸ್ತೆಯು ಊರ್ಜಿತದಲ್ಲಿರಲಿಲ್ಲ ಎಂದರೆ ಸರಿ. ಹಿಲ್ಡಾದಂತಿಯವರು ಯಾವ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ ಅದನ್ನು ಕ್ರಯಪತ್ರದಲ್ಲಿ ಕಾಣಿಸಿದ್ದಾರೆ ಎಂದರೆ, ಯಾವುದೇ ರಸ್ತೆ ಇರಲಿಲ್ಲ. ದಿಃ 04.04.2007 ರ ಕ್ರಯಪತ್ರ ಆಗುವ ಸಮಯದಲ್ಲಿ ಅದರಲ್ಲಿ ಕಾಣಿಸಿದ ರಸ್ತೆಯು ಅಸ್ತಿತ್ವದಲ್ಲಿ ಇರಲಿಲ್ಲ. ಕ್ರಯಪತ್ರದಲ್ಲಿ ರಸ್ತೆ ಎಂದು ನಮೂದಿಸಿರುವ ಸ್ಥಳವು ರಸ್ತೆಗಾಗಿ ಊರ್ಜಿತವಿಟ್ಟಂತಹ ಸ್ಥಳ ಎಂದರೆ ಸರಿ. ಸದರಿ ಊರ್ಜಿತವಿಟ್ಟಂತಹ ಸ್ಥಳವನ್ನು ನಾವು ಉಪಯೋಗಿಸುತ್ತಿರಲಿಲ್ಲ. ಊರ್ಜಿತವಿಟ್ಟ ಸ್ಥಳವನ್ನು ಶಾಶ್ವತವಾಗಿ ರಸ್ತೆಗಾಗಿ ಇಡಬೇಕು ಎಂದು ನಮೂದಿಸಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಹಾಗೆ ನಮೂದಿಸಿದ್ದಾರೆ.

ದಾವೆ ಸಲ್ಲಿಸುವ ಪೂರ್ವದಲ್ಲಿ ನನಗೂ ಮತ್ತು 2 ಮತ್ತು 3 ನೇ ಪ್ರತಿವಾದಿಯರ ನಡುವೆ ವಿವಾದ ಪ್ರಾರಂಭವಾಗಿತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕ್ರಯವರಿಸಿಕೊಂಡಂತಹ ಸ್ವತ್ತನ್ನು ನನಗೆ ಮಾರಾಟ ಮಾಡಬೇಕು ಎಂದು ನಾನು ಕೇಳಿಕೊಂಡಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿಯು ಸ್ವತ್ತನ್ನು ನನಗೆ ಮಾರಾಟ ಮಾಡುತ್ತೇನೆ ಎಂದು ತಿಳಿಸಿದ್ದರು. ಹಾಗೆ ಸ್ವತ್ತನ್ನು ನನಗೆ ಮಾರಾಟ ಮಾಡುತ್ತೇನೆ ಎಂದು 2008 ರಲ್ಲಿ ಹೇಳಿದ್ದರು. 2 ನೇ ಪ್ರತಿವಾದಿಯು ನನಗೆ ಸ್ವತ್ತನ್ನು ಮಾರಾಟ ಮಾಡಿರುವುದಿಲ್ಲ. ನಂತರ 2015 ರಲ್ಲಿ 3 ನೇ ಪ್ರತಿವಾದಿಗೆ ಸ್ವತ್ತುಗಳನ್ನು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆದರೆ ನನಗೆ ತಿಳಿದಿರಲಿಲ್ಲ. ಹಾಗೆ ಸ್ವತ್ತುಗಳನ್ನು ಮಾರಾಟ ಮಾಡುತ್ತೇನೆ ಎಂದು ನನಗೆ ತಿಳಿಸಿ, ನನಗೆ ಮಾರಾಟ ಮಾಡದ ಕಾರಣ ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ವೈಮನಸ್ಸು ಪ್ರಾರಂಭವಾಗಿರುತ್ತದೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ಹಕ್ಕಿನ ಸ್ಥಿರಾಸ್ತಿಯಲ್ಲಿ ಒಂದು ಬಾವಿ ತೆಗೆಸಿದ್ದಾರೆ ಎಂದರೆ ಸರಿ. ಆದರೆ ಸದರಿ ಬಾವಿಯನ್ನು ನಾನು ತೆಗೆಸಿದ್ದೇನೆ. ಸದರಿ ಬಾವಿಯನ್ನು ನಾನು ತೆಗೆಸಿದ್ದೇನೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೆ. ಚೆಕ್ ಮೂಲಕ ಅವರಿಗೆ ಹಣ ಪಾವತಿಸಿದ್ದೇನೆ. ಬಾವಿ ತೆಗೆದ ಬಾಬ್ತು ಚೆಕ್ ನೀಡಲಾಗಿದೆ ಎಂದು ಅದರಲ್ಲಿ ನಮೂದಿಸಿರುವುದಿಲ್ಲ. ಬಾವಿಯನ್ನು ನಾನೇ ತೆಗೆಸಿದ್ದೇನೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿದ್ದೇನೆ. ಸದರಿ ಬಾವಿಯನ್ನು ನಾನು ತೆಗೆಸಿರುವುದಿಲ್ಲ ಮತ್ತು 2 ಮತ್ತು 3 ನೇ ಪ್ರತಿವಾದಿಯರು ಅವರ ಜಾಗದಲ್ಲಿ ಬಾವಿಯನ್ನು ತೆಗೆಸಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ

ಪ್ರತಿವಾದಿಯು ಸ್ವತ್ತನ್ನು ನನಗೆ ಮಾರಾಟ ಮಾಡದೇ ಇದ್ದ ಕಾರಣ, ಕ್ರಯಪತ್ರದಲ್ಲಿ ಊರ್ಜಿತವಿಟ್ಟಂತಹ ರಸ್ತೆಯನ್ನು ಮುಚ್ಚಿದ್ದಲ್ಲಿ ನನಗೆ ಸ್ವತ್ತನ್ನು ಮಾರಾಟ ಮಾಡುತ್ತಾರೆ ಎಂದು ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.

**PW-1**